**ಟ್ರೋಲ್ ಮಾಡುವವರ ಮನಸ್ಥಿತಿಯನ್ನು ನೋಡುವಾಗ ವಿಕೃತಿಯೇ ಪ್ರಮುಖವಾಗಿರುತ್ತದೆ. ಇದನ್ನು ನಾವು 'ಕ್ರ್ಯಾಬ್ ಮೆಂಟಾಲಿಟಿ' ಅಂತಲೂ ಕರೆಯಬಹುದು. ಇತರರನ್ನು ಕೆಳಗೆ ಎಳೆಯುವುದಕ್ಕೆ ಕಾಯುತ್ತಿರುವಂತಹ ಮತ್ತು ಅವಕಾಶ ಸಿಕ್ಕಾಗಲೆಲ್ಲ ಕೆಳಗೆ ಎಳೆದುಬಿಡುವಂಥ ಒಂದು ಮನಸ್ಥಿತಿ.**

# ಆಳಿಗೊಂದು ಕಮೆಂಟ್ ಕಮೆಂಟಿಸುವ ಮುನ್ನ

**ರೂಪಾ ಕೆ.ಎಂ.**

ಸಾಮಾಜಿಕ ಜಾಲತಾಣಗಳಲ್ಲಿ ಹೆಣ್ಣುಮಕ್ಕಳೆಡೆಗೆ ತೂರಿಬರುವ 'ನೆಗೆಟಿವ್ ಕಮೆಂಟ್‌ಗಳ' ಬಾಣಗಳು ಎಷ್ಟಿವೆ ಎಂದು ಅಂದಾಜು ಮಾಡುವುದು ತುಸು ಕಷ್ಟವೇ. ಹೆಣ್ಣುಮಕ್ಕಳು ಮಾತನಾಡುತ್ತಿದ್ದಾರೆ, ಅಭಿಪ್ರಾಯ ಮಂಡಿಸುತ್ತಿದ್ದಾರೆ ಎಂದಾಕ್ಷಣ ಅಲ್ಲೊಂದು 'ತೀರ್ಪು' ಜೋರಾಗಿಯೇ ಪ್ರಕಟವಾಗುತ್ತದೆ. 'ನೀನೇನು ಸಾಚಾನಾ, ನಿಂಗೇನು ಗೊತ್ತು?, ಮೊದಲು ಮುಸುರೆ ಸರಿಯಾಗಿ ತಿಕ್ಕು, ಆಮೇಲೆ ಲೋಕದ ಬಗ್ಗೆ ಮಾತಾಡು. ಮೊದಲು ಮದುವೆಯಾಗಿ, ಸಂಸಾರ ಮಾಡು ಆಮೇಲೆ ಕಂಡವರ ಬಗ್ಗೆ ಮಾತಾಡುವಿಯಂತೆ. ಮಾತಾಡೋದಕ್ಕಿಂತ ಮೊದಲು ಸರಿಯಾಗಿ ಬಟ್ಟೆ ಹಾಕೊ' ಹೀಗೆ ಶುರುವಾಗುವ ಕಮೆಂಟ್‌ಗಳು ಕೊನೆಗೆ ಆಕೆಯ ದೇಹದ ನಾನಾ ಭಾಗಗಳನ್ನು ಕೇಂದ್ರೀಕರಿಸಿ ನಿಂದನೆ ಮಾಡಲು ತೊಡಗುತ್ತವೆ. ಅಸಹ್ಯ, ಅಶ್ಲೀಲ ಹಾಗೂ ಅಸಭ್ಯ ಪದಗಳಲ್ಲಿ ಕಮೆಂಟ್‌ಗಳನ್ನು ಹರಿಯಬಿಡಲೆಂದು ಒಂದು ದಂಡೇ ಕಾದಿರುತ್ತದೆ.

ಈ ಜಾಲತಾಣಗಳ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗೆಲ್ಲ ಇಲ್ಲಿ ಎಲ್ಲರೂ ಎಲ್ಲರನ್ನೂ ಬೈದುಕೊಂಡೇ ಪ್ರಚಾರಕ್ಕೆ ಬರುತ್ತಾರೇನೋ ಎನ್ನುವ ಅಲಿಖಿತ ನಿಯಮವೊಂದು ಜಾರಿಯಲ್ಲಿರುವಂತೆ ಮೇಲ್ನೋಟಕ್ಕೆ ಅನಿಸುತ್ತದೆ. ವೈಯಕ್ತಿಕ ಬದುಕಿನಲ್ಲಿ ಎಂದೂ ಪಾಲಿಸಲಾಗದ ನಿಯಮಗಳನ್ನು ಬೇರೆಯವರಿಗೆ ಬೋಧಿಸುವ, ವ್ಯಕ್ತಿತ್ವ ನಿಂದನೆ ಮಾಡುತ್ತಲೇ, ಇನ್ನಷ್ಟು ರೊಚ್ಚಿಗೆಬ್ಬಿಸಿ ಅದರಲ್ಲಿಯೇ ಖುಷಿಪಡುವ ವಿಕೃತ ಆಲೋಚನೆಗಳೇ ಇಂಥ ಕಮೆಂಟ್‌ಗಳ ಹಿಂದೆ ಕೆಲಸ ಮಾಡಿರುತ್ತವೆ. ಒಂದು ಕೆಟ್ಟ ಕಮೆಂಟ್ ಹರಿಯಬಿಟ್ಟರೆ ಅಬ್ಬಬ್ಬಾ ಎಂದರೆ ಏನಾಗುತ್ತದೆ?, ಇನ್ನಷ್ಟು ಜನ ಇಂತಹುದೇ ಕಮೆಂಟ್ ಹಾಕುತ್ತಾರೆ' ಎಂಬ ಧೋರಣೆಯಲ್ಲಿಯೇ ಇಲ್ಲಸಲ್ಲದ ಕಮೆಂಟ್‌ಗಳನ್ನು ಹರಿಯಬಿಡುತ್ತಾರೆ. ಸಾಮಾಜಿಕ ಜಾಲತಾಣದಲ್ಲಿ ಹಾಸುಹೊಕ್ಕಾಗಿರುವ ಅನಾಮಿಕತೆಯೂ ಈ ಧೋರಣೆಗೆ ಪುಷ್ಟಿ ಒದಗಿಸುತ್ತದೆ.

ಇತ್ತೀಚೆಗೆ ತಾಯಿಯೊಬ್ಬರು ತನ್ನ 12 ವರ್ಷದ ಹೆಣ್ಣುಮಗಳ ಜತೆ 'ಅಡುಗೆ ಮನೆಯ ಕಿತಾಪತಿಗೆ' ಸಂಬಂಧಿಸಿದಂತೆ ಹಾಸ್ಯಧಾಟಿಯಲ್ಲಿ ಒಂದು ರೀಲ್ಸ್ ಮಾಡಿದ್ದರು. ಆ ರೀಲ್ಸ್‌ನಲ್ಲಿ ಯಾವ ವಿಷಯವಿದೆ ಎಂಬುದನ್ನು ನೋಡಲು ಮರೆತ ಜನ, 12 ವರ್ಷದ ಪೋರಿಗೆ 'ಬ್ರಾ' ಹಾಕಿಕೊಳ್ಳುವಂತೆ ತಾಕೀತು ಮಾಡಿ, ಕಮೆಂಟ್‌ಗಳನ್ನು ಹರಿಯಬಿಟ್ಟಿದ್ದರು. ಇನ್ನೊಂದು ಕಡೆ 8ರ ಪೋರಿ ತನ್ನ ತಂದೆಗೆ ತುಟಿಗೆ ತುಟಿ ಒತ್ತಿ ಮುತ್ತ ಕೊಟ್ಟಿದ್ದಳು. ಅಪ್ಪ–ಮಗಳ ಸಂಬಂಧವನ್ನು ಗಮನಿಸದ ನೆಟ್ಟಿಗರು, ಸಣ್ಣ ವಯಸ್ಸಿನ ಮಗಳು ಎಂಬುದನ್ನು ಮರೆತು ಕೆಟ್ಟ ಕೊಳಕ ಭಾಷೆಯಲ್ಲಿ ಕಮೆಂಟ್‌ಗಳ ಸುರಿಮಳೆಯನ್ನೇ ಹರಿಸಿದ್ದರು. ಇವರೆಡೂ ಸಣ್ಣ ಉದಾಹರಣೆಗಳಷ್ಟೆ. ಈ ಎರಡೂ ಪ್ರಕರಣಗಳಲ್ಲಿ ಆ ಮಕ್ಕಳ ತಾಯಂದಿರೇ 'ದಯವಿಟ್ಟು ಕೆಟ್ಟ ಕಮೆಂಟ್ ಹಾಕಬೇಡಿ. ಇನ್ನು ಮುಂದೆ ರೀಲ್ಸ್ ಮಾಡುವುದೇ ಇಲ್ಲ. ದಯವಿಟ್ಟು ನಿಲ್ಲಿಸಿ. ರೋಸಿ ಹೋಗಿದ್ದೇವೆ. ನಿಮ್ಮ ಕಮೆಂಟ್‌ಗಳು ನಮ್ಮ ವೈಯಕ್ತಿಕ ಬದುಕಿನಲ್ಲಿ ತಲ್ಲಣವನ್ನೇ ಎಬ್ಬಿಸಿವೆ' ಎಂದು ವಿಡಿಯೊ ಮಾಡಿ ಗೋಗರೆಯುವವರೆಗೂ ಕಾಮೆಂಟಿಗರ ಕಮೆಂಟ್‌ಗಳು ಬತ್ತಲಿಲ್ಲ.



ಟ್ರೋಲ್ ಮಾಡಲು, ಮೀಮ್ಸ್ ಮಾಡಲು ಒಂದು ವಿಷಯ ಬೇಕು. ಅದು ಹೆಣ್ಣಿನ ಸುತ್ತವಿದ್ದರೆ ಮುಗೀತು. 'ಓ... ಹೆಣ್ಮಗು ಹೆಣ್ಮಗು' ಎಂಬಂಥ ಮೇಲ್ನೋಟಕ್ಕೆ ಬಹಳ ಸರಳವೆನಿಸುವ ಮೀಮ್ಸ್ ಒಂದು ಎಲ್ಲ ಕಡೆಗಳಲ್ಲಿಯೂ ಹರಿದಾಡಿತ್ತು. ಆದರೆ, ಆಳವಾಗಿ ಗಮನಿಸಿದರೆ, ಹೆಣ್ಣಿನ ಬುದ್ಧಿವಂತಿಕೆಯನ್ನು, ಅವಳ ಒಟ್ಟು ವ್ಯಕ್ತಿತ್ವವನ್ನೇ ಬಹಳ ಲಘುವಾಗಿ ಪರಿಗಣಿಸಬಲ್ಲ ಮಾತದು. ನಾವು ತಾಂತ್ರಿಕವಾಗಿ ಅದೆಷ್ಟೇ ಮುಂದುವರಿದಿದ್ದೇವೆ ಎಂದು ಹೇಳಿಕೊಂಡರೂ, ಸಾಮಾಜಿಕ ಪ್ರಬುದ್ಧತೆ (social intelligence) ಎಷ್ಟು ಕೆಳಮಟ್ಟದಲ್ಲಿದೆ ಎಂಬುದನ್ನು ಹೆಣ್ಣುಮಕ್ಕಳೆಡೆಗೆ ಬರುವ ಕಮೆಂಟ್‌ಗಳನ್ನು ನೋಡಿಯೇ ಅರಿಯಬಹುದು.

ಕವಿತೆಯನ್ನು ಕವಿತೆಯಾಗಿ ನೋಡುವ, ಸಿನಿಮಾವನ್ನು ಸಿನಿಮಾವಾಗಿ ಪ್ರೀತಿಸುವ, ನಟನೋ, ರಾಜಕಾರಣಿಯೋ, ಸ್ವಾಮೀಜಿಯೋ ಹೀಗೆ ಸಾಮಾಜಿಕವಾಗಿ ಗುರುತಿಸಿಕೊಂಡವರ ತಪ್ಪು–ಒಪ್ಪುಗಳನ್ನು ಅರಿಯುವ ವ್ಯವಧಾನವಂತೂ ಕಳೆದುಕೊಂಡಿದ್ದೇವೆ. ಧರ್ಮ, ಜಾತಿ, ಭಾಷೆ, ಗಡಿಗಳ ಬಗೆಗಿನ ಅಭಿಮಾನ, ಆರಾಧನಾ ಭಾವ ಹೀಗೆ ಇವುಗಳ ನೆರಳಲ್ಲಿ ಏನನ್ನಾದರೂ ಸಮರ್ಥಿಸಿಕೊಂಡುಬಿಡುತ್ತೇವೆ. ಆದರೆ, ಹೆಣ್ಣಿನ ವಿಷಯದಲ್ಲಿ ಅವಳು ಸೆಲೆಬ್ರಿಟಿಯೇ ಇರಲಿ, ಶ್ರೀಸಾಮಾನ್ಯಳೇ ಇರಲಿ; ಅವಳ ನಡೆಯನ್ನು ಮಾತ್ರ ಪ್ರತಿ ಕ್ಷಣ 'ಇವಳಾ... ಇವಳು ಹೀಗೆಯೇ' ಎಂದು ತೀರ್ಪು ಕೊಟ್ಟೇ ಕಮೆಂಟ್ ಮಾಡುವ ಚಾಳಿ ಸಾಮಾಜಿಕ ಜಾಲತಾಣದಲ್ಲಿ ಲಾಗಾಯ್ತಿನಿಂದಲೂ ಮುಂದುವರಿದಿದೆ.

ಏನನ್ನಾದರೂ ಹೇಳಿ ಪ್ರಚಾರಕ್ಕೆ ಬರುವವರು ಒಂದು ಕಡೆ ಇದ್ದರೆ, ಏನು ಬೇಕಾದರೂ ಕಮೆಂಟ್ ಮಾಡಿ ಇನ್ನೊಬ್ಬರನ್ನು ಹಣಿಯಬಲ್ಲೆ ಎಂದುಕೊಂಡವರ ಸಂಖ್ಯೆಯೂ ಕಡಿಮೆ ಇಲ್ಲ. ಮನೆ, ಕುಟುಂಬ ಎಲ್ಲ ಇದ್ದೂ, ಎಲ್ಲರ